# ಪೋಷಕರೇ ಗಮನಿಸಿ

ಮಗುವಿನ ಚಾರಿತ್ರ್ಯನಿರ್ಮಾಣದ ಕಾರ್ಯವು ಮನೆಯಲ್ಲಿಯೇ ಆರಂಭಗೊಳ್ಳುತ್ತದೆ. ಈ ಕಾರ್ಯಕ್ಕೆ ತೊಡಗುವ ಮೊದಲು ಪೋಷಕರಾಗಿ ನೀವು ಎದುರಿಸಬೇಕಾದ ಕೆಲವು ಮೂಲಭೂತ ಪ್ರಶ್ನೆಗಳು ಹೀಗಿವೆ: ೧. ನಮ್ಮ ಮಗುವಿನ ಚಾರಿತ್ರ್ಯವನ್ನು ರೂಪಿಸುವ ಕಾರ್ಯವನ್ನು ನಾವು ಬಾಲ್ಯದ ಯಾವ ಹಂತದಲ್ಲಿ ಆರಂಭಿಸಬೇಕು? ೨. ನಮ್ಮ ಮಗುವನ್ನು ಬೆಳೆಸುವಾಗ ನಾವು ಹೊಂದಿರಬೇಕಾದ ಆದರ್ಶ ಮನೋಭಾವ ಯಾವುದು? ೩. ಮಗುವಿಗೆ ಮೌಲ್ಯಗಳನ್ನು ಕಲಿಸುವುದು ಹೇಗೆ?

**೧. ಚಾರಿತ್ರ್ಯ ನಿರ್ಮಾಣದ ಕಾರ್ಯವನ್ನು ಎಂದು ಆರಂಭಿಸಬೇಕು?:**

ಭಾರತೀಯ ಸಂಸ್ಕೃತಿಯ ಪ್ರಕಾರ ನಿಮ್ಮ ಮಗುವಿನ ಚಾರಿತ್ರ್ಯ ನಿರ್ಮಾಣವು ಮಗು ಹುಟ್ಟುವುದಕ್ಕಿಂತ ಮುಂಚೆಯೇ ಆರಂಭಗೊಳ್ಳಬೇಕು. ಮಗುವಿನ ಜನನದ ಪ್ರತೀಕ್ಷೆಯಲ್ಲಿರುವ ತಂದೆತಾಯಿಗಳು ಪ್ರಾರ್ಥನೆ, ಪೂಜೆಗಳಲ್ಲಿ ಹೆಚ್ಚಾಗಿ ತೊಡಗುವುದು ಒಳ್ಳೆಯದು. ಹಾಗೆಯೇ ಒಳ್ಳೆಯ ಪರಿಶುದ್ಧ ಜೀವನವನ್ನು ಅವರು ನಡೆಸಬೇಕು. ಸ್ವಾಮಿ ವಿವೇಕಾನಂದರ ಜನನಕ್ಕೆ ಪೂರ್ವದಲ್ಲಿ ಅವರ ತಾಯಿ ಭುವನೇಶ್ವರಿ ದೇವಿಯು ಉಪವಾಸ ಮುಂತಾದ ಕಠಿಣ ವ್ರತಗಳನ್ನು ಕೈಗೊಂಡಿದ್ದರು. ಇದನ್ನು ಸ್ವಾಮೀಜಿಯವರೇ ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಂಡಿದ್ದಾರೆ.



**೨. ಮಗುವನ್ನು ಬೆಳೆಸುವಾಗ ಹೊಂದಿರಬೇಕಾದ ಆದರ್ಶ ಮನೋಭಾವ ಯಾವುದು? :** ಮಗುವು ತನ್ನದೇ ಆದ ಸಂಸ್ಕಾರಗಳನ್ನು ಪಡೆದುಕೊಂಡೇ ಹುಟ್ಟಿರುತ್ತದೆ ಎನ್ನುವುದನ್ನು ನೆನಪಿಡಬೇಕು. ಆದ್ದರಿಂದ ನೀವು ಆ ಮಗುವಿಗೆ ಮಾಡಬಹುದಾದ ಏಕಮಾತ್ರ ಸಹಾಯವೆಂದರೆ, ನಿಮ್ಮನ್ನು ನೀವು ಒಬ್ಬ ಆದರ್ಶ ಮಾದರಿ ವ್ಯಕ್ತಿಯಾಗಿ ಮಗುವಿನ ಮುಂದೆ ತೋರ್ಪಡಿಸಿಕೊಳ್ಳುವುದು; ಹಾಗೆಯೇ ಮಗುವಿನ ನೈತಿಕ ಪ್ರಗತಿಗಾಗಿ ಸೂಕ್ತವಾದ ಬಾಹ್ಯ ಪರಿಸರವನ್ನು ನಿಮ್ಮ ಮನೆಯಲ್ಲಿ ನಿರ್ಮಾಣ ಮಾಡುವುದು.

**೩. ಮಗುವಿಗೆ ಮೌಲ್ಯಗಳನ್ನು ಕಲಿಸುವುದು ಹೇಗೆ? :** ಇದು ಬಹುಮುಖ್ಯವಾದ ವಿಷಯ. ಅದಕ್ಕಾಗಿ ಕೆಳಗಿನ ಸೂಚನೆಗಳನ್ನು ಪರಿಪಾಲಿಸಲು ಯತ್ನಿಸಿದರೆ ಒಳ್ಳೆಯದು: ೧. ನಿಮ್ಮ ಮಗುವಿಗೆ ನೀವು ನೀಡಲು ಇಚ್ಛಿಸುವ ಮೌಲ್ಯಗಳನ್ನು, ಮೊದಲು ನೀವು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ. ೨. ನೀವು ಯಾವ ಮೌಲ್ಯಗಳ ಪ್ರಕಾರ ಜೀವನ ನಡೆಸುತ್ತಿದ್ದೀರೋ, ಅವುಗಳನ್ನು ಪರಿಣಾಮಕಾರಿ ವಿಧಾನದಲ್ಲಿ ಮಗುವಿಗೆ ಸಂವಹನ ಮಾಡಲು ಅಥವಾ ತಿಳಿಸಿಕೊಡಲು ಪ್ರಯತ್ನಿಸಿ. ನೈತಿಕತೆಯ ಬಗ್ಗೆ ನಿಮ್ಮ ಧೋರಣೆಗಳು ಮತ್ತು ಅಭಿಪ್ರಾಯಗಳನ್ನು ನಿಮ್ಮ ಮಗುವು ಅಮೂಲ್ಯವೆಂದು ಭಾವಿಸಿ, ಹಾಗೆಯೇ ತನ್ನ ಅಭಿಪ್ರಾಯಗಳನ್ನೂ ರೂಪಿಸಿಕೊಳ್ಳುತ್ತದೆ ಎಂಬುದನ್ನು ನೆನಪಿಡಿ. ೩. ಮೌಲ್ಯಗಳ ಬಗ್ಗೆ ನಿಮ್ಮ ಪತ್ನಿಯ ಜೊತೆಗೆ ಸಮಾನ ಅಭಿಪ್ರಾಯಗಳನ್ನು ಹೊಂದಿರುವುದು ಬಹು ಮುಖ್ಯ. ಈ ಮಹತ್ವದ ವಿಷಯದ ಬಗ್ಗೆ ತಂದೆತಾಯಿಯರಲ್ಲಿ ಒಮ್ಮತವಿರುವುದು ಮಕ್ಕಳ ನೈತಿಕ ಬೆಳವಣಿಗೆಗೆ ಅತ್ಯಗತ್ಯ. ೪. ದಿನನಿತ್ಯದ ಸನ್ನಿವೇಶಗಳಲ್ಲಿ ಮೌಲ್ಯಗಳನ್ನು ಕುರಿತ ಚಟುವಟಿಕೆ ಮತ್ತು ಮಾತುಕತೆಗಳನ್ನು, ಪ್ರಜ್ಞಾಪೂರ್ವಕವಾಗಿಯೇ, ಅಳವಡಿಸಿಕೊಳ್ಳಿ. ೫. ನಿಮ್ಮ ಮಗುವಿನ ಶಿಕ್ಷಕರನ್ನು ಕಾಲಕಾಲಕ್ಕೆ ಭೇಟಿಯಾಗಿ, ಮಗುವಿನ ನಡವಳಿಕೆಯ ಬಗ್ಗೆ ಮಾಹಿತಿ ಪಡೆದುಕೊಳ್ಳಿ. ಹಾಗೆಯೇ ಅದನ್ನು ಉತ್ತಮಗೊಳಿಸಲು, ಏನೇನು ಮಾಡಬಹುದು ಎಂಬುದಕ್ಕೆ ಆ ಶಿಕ್ಷಕರ ಆಪ್ತ ಸಲಹೆ ಪಡೆದುಕೊಳ್ಳಿ. ೬. ನಿಮ್ಮ ಅಮೂಲ್ಯವಾದ ಸಮಯವನ್ನು, ನಿಮ್ಮ ಅಮೂಲ್ಯವಾದ ಮಗುವಿನ ಜೊತೆಗೆ ಹಂಚಿಕೊಳ್ಳಿ. ನಿಮ್ಮ ಕೆಲಸಕಾರ್ಯಗಳು ಎಷ್ಟೇ ಮಹತ್ವದ್ದಾಗಿದ್ದರೂ, ಅವೆಲ್ಲಕ್ಕಿಂತ ನೀವು ನಿಮ್ಮ ಮಗುವಿನ ಜೊತೆಗೆ ಕಳೆಯುವ ಕಾಲ ಅತ್ಯಂತ ಅಮೂಲ್ಯವಾದದ್ದು ಎನ್ನುವುದು ಜ್ಞಾಪಕದಲ್ಲಿರಲಿ. ೭. ನೀವು ಮಗುವಿಗೆ ಹೇಳುವ ವಿಚಾರದಷ್ಟೇ, ಅದನ್ನು ಹೇಗೆ, ಯಾವ ವಿಧಾನದಲ್ಲಿ ಹೇಳುತ್ತೀರಿ ಎನ್ನುವುದೂ ಬಹಳ ಮುಖ್ಯವಾದುದು. ಮಗುವಿನ ಮುಂದೆ ಒರಟಾಗಿ ನಡೆದುಕೊಳ್ಳುವುದು ಬಹಳ ತಪ್ಪು. ೮. ಮಗುವಿನ ದೌರ್ಬಲ್ಯಗಳನ್ನು ಎಂದಿಗೂ ಅದರ ಮುಂದೆ ಎತ್ತಿ ಆಡಿ, ಅವಮಾನ ಮಾಡಬೇಡಿ. ಆ ದೌರ್ಬಲ್ಯಗಳಿಂದ ಹೊರಬರಲು ಮಗುವಿಗೆ ಆತ್ಮವಿಶ್ವಾಸ ತುಂಬಿ ಮತ್ತು ಅದಕ್ಕಾಗಿ ಬೇಕಾದ ಇತರ ಸಹಾಯಗಳನ್ನು ಮಾಡಿಕೊಡಿ. ೯. ಮಗುವು ನಿಮ್ಮಿಂದ, ತನ್ನ ಒಳ್ಳೆ ಕಾರ್ಯಗಳಿಗಾಗಿ ಮತ್ತು ಸಾಧನೆಗಾಗಿ ಪ್ರಶಂಸೆ ಮತ್ತು ಉತ್ತೇಜನಗಳನ್ನು ಅಪೇಕ್ಷಿಸುತ್ತದೆ. ಹೀಗಾಗಿ ಅವುಗಳನ್ನು ಮುಕ್ತಮನಸ್ಸಿನಿಂದ, ಧಾರಾಳವಾಗಿ ನೀಡಿ. ಹಾಗೆಯೇ ಮಗುವನ್ನು ಎಂದಿಗೂ ಇತರರೊಂದಿಗೆ ಹೋಲಿಸಿ ಮಾತನಾಡಬೇಡಿ. ೧೦. ಮಗುವು ತಾನು ಅವಶ್ಯವಾಗಿ ಕೈಗೊಳ್ಳಬೇಕಾದ ಕೆಲವು ಸಣ್ಣಪುಟ್ಟ ಕಾರ್ಯಗಳ ಜವಾಬ್ದಾರಿಯನ್ನು ತಾನೇ ಹೊತ್ತುಕೊಳ್ಳಲು ಅವಕಾಶ ಮಾಡಿಕೊಡಿ. ಇದರಿಂದ ಕರ್ತವ್ಯ ಪ್ರಜ್ಞೆ ಮತ್ತು ಜವಾಬ್ದಾರಿಯ ಮನೋಭಾವ ಮೂಡಲು ಸಾಧ್ಯವಾಗುತ್ತದೆ. ೧೧. ನಿಮ್ಮ ಮಗುವಿನಲ್ಲಿ ಶಿಸ್ತು ಮತ್ತು ಸಂಯಮದ ಭಾವನೆ ಮೂಡಿಸಿ. ೧೨. ಮಾನವೀಯ ಸಂಬಂಧಗಳನ್ನು ಚೆನ್ನಾಗಿ ಇಟ್ಟುಕೊಳ್ಳುವುದರಲ್ಲಿ ಮಗುವಿಗೆ ತರಬೇತಿ ನೀಡಿ. ೧೩. ನಿಮ್ಮ ಮಗುವಿನ ದೈನಂದಿನ ಚಟುವಟಿಕೆಗಳು ಮತ್ತು ಒಡನಾಡುವ ಸ್ನೇಹಿತರ ಬಗ್ಗೆ ನಿಗಾ ಇಡಿ. ೧೪. ಮಗುವಿಗೆ ಸಮಯವನ್ನು ಹೇಗೆ ಸದುಪಯೋಗ ಮಾಡಿಕೊಳ್ಳಬೇಕು ಎನ್ನುವುದನ್ನು ಹೇಳಿಕೊಡಿ. ೧೫. ಸಮಾಜ ಸೇವಾಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಮಗುವನ್ನು ಪ್ರೋತ್ಸಾಹಿಸಿ.



# ಸಂಸ್ಕೃತ ಸಾಹಿತ್ಯದಲ್ಲಿ ವಸಂತಋತುವಿನ ವರ್ಣನೆ

— ವಿದ್ವಾನ್ ಎಚ್.ವಿ. ನಾಗರಾಜರಾವ್

**ಏಪ್ರಿಲ್ ಮಾಸದಲ್ಲಿ ಬರುವ ಯುಗಾದಿಯು ವರ್ಷಾರಂಭದ ಪರ್ವದಿನವಷ್ಟೇ ಅಲ್ಲ, ವಸಂತ ಋತುವಿನ ಆಗಮನದ ಸಂಕೇತವೂ ಕೂಡ. ವಸಂತ ಋತುವನ್ನು ಸಂಸ್ಕೃತ ಕವಿಗಳು ಹಾಡಿ ಹೊಗಳಿದ್ದಾರೆ. ಇದರ ರಮ್ಯ ಚಿತ್ರಣವನ್ನು ನಮ್ಮ ಮುಂದೆ ಇಟ್ಟಿರುವ ಶ್ರೀಯುತರು ದೇಶ ವಿದೇಶಗಳಲ್ಲಿ ಸಂಸ್ಕೃತ ಅಧ್ಯಾಪನ ಕಾರ್ಯವನ್ನು ನಡೆಸಿರುವ ಘನ ವಿದ್ವಾಂಸರು. ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ಕಾರ್ಯವೆಸಗಿ ನಿವೃತ್ತರಾದವರು.**

**ಭಾ**ರತೀಯರು ಪೂರ್ವಕಾಲದಿಂದಲೂ ಋತುಗಳ ಬದಲಾವಣೆಯನ್ನೂ, ಹಾಗೆಯೇ ಒಂದೊಂದು ಋತುವಿನ ವೈಶಿಷ್ಟ್ಯವನ್ನೂ ಚೆನ್ನಾಗಿ ಅರಿತಿದ್ದರು. ಅದರಲ್ಲೂ ವಸಂತಋತು ಸರ್ವಜನಪ್ರಿಯವಾದ ಋತುವಾಗಿದೆ. ಭಗವಾನ್ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ, **'ಋತೂನಾಂ ಕುಸುಮಾಕರಃ'** – ಋತುಗಳಲ್ಲಿ ನಾನು ವಸಂತಋತು – ಎಂದು ಹೇಳಿರುವುದು ಗಮನಾರ್ಹ (ವಿಭೂತಿಯೋಗ ೧೦ : ೩೫). ಅಮರಕೋಶದಲ್ಲಿ 'ವಸಂತೇ ಪುಷ್ಪಸಮಯಃ' ಎಂದು ಹೇಳಿ ವಸಂತಋತುವಿನಲ್ಲಿ ಪುಷ್ಪಸಮೃದ್ಧಿ ಇರುವುದನ್ನು ಸೂಚಿಸಲಾಗಿದೆ.

ಭಾರತದೇಶದ ಆದಿಕವಿ ವಾಲ್ಮೀಕಿ, ಆತನ ಆದಿಕಾವ್ಯ ರಾಮಾಯಣ. ಅದರಲ್ಲಿ ಸಂದರ್ಭೋಚಿತವಾಗಿ ಋತುಗಳ ವರ್ಣನೆ ಮನೋಜ್ಞವಾಗಿ ಮೂಡಿಬಂದಿದೆ. ಕಿಷ್ಕಿಂಧಾಕಾಂಡದ ಮೊದಲನೆಯ ಸರ್ಗದಲ್ಲಿ ಶ್ರೀರಾಮನು ಮಾಡುವ ವಸಂತ ವರ್ಣನೆ ಅಂದಚೆಂದಗಳಿಂದ ತುಂಬಿದೆ. ಅಲ್ಲಿ ವಸಂತಕಾಲವನ್ನು 'ಸುರಭಿ' ಎಂಬ ಪದದಿಂದ ಕರೆದಿದ್ದಾರೆ.

**ಸುಖಾನಿಲೋಽಯಂ ಸೌಮಿತ್ರೇ ಕಾಲಃ ಪ್ರಚುರಮನ್ಮಥಃ ।**
**ಗಂಧವಾನ್ ಸುರಭಿರ್ಮಾಸೋ ಜಾತಪುಷ್ಪಫಲದ್ರುಮಃ ॥**
(೧ : ೧೦)

"ಲಕ್ಷ್ಮಣ, ಈ ಋತುವಿನಲ್ಲಿ ಬೀಸುವ ತಂಗಾಳಿ ಹರ್ಷವನ್ನುಂಟುಮಾಡುತ್ತದೆ. ಸುಗಂಧವು ಗಾಳಿಯಲ್ಲಿ ತೇಲಿಬರುತ್ತದೆ. ಎಲ್ಲ ಮರಗಳಲ್ಲಿಯೂ ಹೂವುಹಣ್ಣು ಹುಟ್ಟುತ್ತವೆ" ಎಂದು ರಾಮನು ಹೇಳುತ್ತಾನೆ.

**ಪತಿತೈಃ ಪತಮಾನೈಶ್ಚ ಪಾದಪಸ್ಥೈಶ್ಚ ಮಾರುತಃ ।**
**ಕುಸುಮೈಃ ಪಶ್ಯ ಸೌಮಿತ್ರೇ ಕ್ರೀಡನ್ನಿವ ಸಮಂತತಃ ॥** (೧ : ೧೩)

"ಕೆಲವು ಹೂವುಗಳು ಉದುರುತ್ತಿವೆ, ಕೆಲವು ಉದುರಿವೆ, ಇನ್ನು ಕೆಲವು ಮರಗಳಲ್ಲಿಯೇ ಇವೆ. ನೋಡು ಸೌಮಿತ್ರಿ, ಅವುಗಳೊಡನೆ ಗಾಳಿಯು ಆಟವಾಡುತ್ತಿರುವಂತಿದೆ."

**ಸ್ವೈಃ ಪಕ್ಷೈಃ ಪವನೋದ್ಧೂತೈರ್ಗವಾಕ್ಷೈಃ ಸ್ಫಾಟಿಕೈರಿವ ।**
**ಅಮೀ ಮಯೂರಾಃ ಶೋಭಂತೇ ಪ್ರನೃತ್ಯಂತಸ್ತತಸ್ತತಃ ॥** (೧:೩೬)

"ಅಲ್ಲಲ್ಲಿ ಕುಣಿಯುತ್ತಿರುವ ನವಿಲುಗಳು ತಮ್ಮ ಗರಿಗಳನ್ನು ಬಿಚ್ಚಿ ತೋರಿಸುತ್ತಿವೆ. ಸ್ಫಟಿಕದ ಗವಾಕ್ಷಗಳಂತೆ ಅವು ಬಣ್ಣಗಳಿಂದ ಕೂಡಿ ಶೋಭಿಸುತ್ತಿವೆ."

ಹೀಗೆ ವಾಲ್ಮೀಕಿ ತನ್ನ ಪ್ರತಿಭೆಯಿಂದ ವಸಂತಋತುವಿನ ಚೆಲುವನ್ನು ಅಂದವಾದ ಶಬ್ದಗಳಲ್ಲಿ ಬಿಂಬಿಸಿದ್ದಾನೆ.

ದಂಡಿ ಮುಂತಾದ ಸಂಸ್ಕೃತ ಆಲಂಕಾರಿಕರು ಮಹಾಕಾವ್ಯ ಲಕ್ಷಣವನ್ನು ಹೇಳುವಾಗ, ಅದರಲ್ಲಿ ಅಷ್ಟಾದಶ ವರ್ಣನೆಗಳಿರಬೇಕೆಂದು ತಿಳಿಸಿದ್ದಾರೆ. ಆ ಹದಿನೆಂಟು ವರ್ಣನೆಗಳಲ್ಲಿ ಋತುವರ್ಣನೆಯೂ ಒಂದು. ಮಹಾಕಾವ್ಯಗಳನ್ನು ರಚಿಸಿದ ಎಲ್ಲ ಕವಿಗಳೂ ಋತುವರ್ಣನೆಯನ್ನು ಮಾಡಿದ್ದಾರೆ. ಕವಿಕುಲಗುರುವೆಂದು ಹೊಗಳಿಕೆಗೆ ಪಾತ್ರನಾದ ಕಾಳಿದಾಸನು ತನ್ನ 'ಕುಮಾರ ಸಂಭವ' ಎಂಬ ಮಹಾಕಾವ್ಯದ ಮೂರನೆಯ ಸರ್ಗದಲ್ಲಿ ವಸಂತಋತುವನ್ನು ಸೊಗಸಾಗಿ ವರ್ಣಿಸಿದ್ದಾನೆ. ವಸಂತನು ಮನ್ಮಥನ ನೈಸರ್ಗಿಕ ಮಿತ್ರ. ಆ ವಸಂತನ ಪ್ರಭಾವದಿಂದ ಶಿವನ ತಪೋವನವೆಲ್ಲ ಸೊಬಗಿನಿಂದ ತುಂಬಿಹೋಯಿತು. ಎಲ್ಲ ಮರಗಳಲ್ಲಿಯೂ ಕುಸುಮಗಳು ಅರಳಿ ಕಂಗೊಳಿಸಿದವು.

**ವರ್ಣಪ್ರಕರ್ಷೇ ಸತಿ ಕರ್ಣಿಕಾರಂ**
**ಧುನೋತಿ ನಿರ್ಗಂಧತಯಾ ಸ್ಮ ಚೇತಃ ।**
**ಪ್ರಾಯೇಣ ಸಾಮಗ್ರ್ಯವಿಧೌ ಗುಣಾನಾಂ**
**ಪರಾಙ್ಮುಖೀ ವಿಶ್ವಸೃಜಃ ಪ್ರವೃತ್ತಿಃ ॥**

"ಕರ್ಣಿಕಾರಕುಸುಮದ ವೈಭವ ಅದ್ಭುತವಾಗಿತ್ತು. ಅದರ ಬಣ್ಣ ಚಿತ್ತಾಕರ್ಷಕವಾಗಿತ್ತು. ಆದರೆ ಆ ಹೂವುಗಳು ನಿರ್ಗಂಧವೆಂಬುದು ಮಾತ್ರ ಆ ಗಿಡದ ಮನಸ್ಸನ್ನು ನೋಯಿಸುತ್ತಿತ್ತು. ಎಲ್ಲ ಗುಣಗಳನ್ನು ಒಂದೆಡೆಯಲ್ಲೇ ಸೇರಿಸುವುದು ವಿಶ್ವಕರ್ತಾರನ ನೀತಿಯಲ್ಲವಷ್ಟೇ!" ಹೀಗೆ ಉದ್ಗರಿಸುತ್ತಾನೆ ಕಾಳಿದಾಸ!

ಭಟ್ಟಿ ಎಂಬ ಕವಿ 'ರಾವಣವಧ' ಎಂಬ ಕಾವ್ಯವನ್ನು ರಚಿಸಿದ್ದಾನೆ. ಅದು ವ್ಯಾಕರಣಬೋಧನೆಗಾಗಿ ರಚಿತವಾದುದಾದರೂ, ಅದರಲ್ಲಿ ಸೊಗಸಾದ ಬಣ್ಣನೆಗಳೂ ಇವೆ. ಅಲ್ಲಿರುವ ವಸಂತ ವರ್ಣನೆಯ ಒಂದು ಪದ್ಯ ಹೀಗಿದೆ:

**ನ ತಜ್ಜಲಂ ಯನ್ನ ಸುಚಾರುಪಂಕಜಂ**
**ನ ಪಂಕಜಂ ತದ್ ಯದಲೀನಷಟ್ಪದಮ್ ।**
**ನ ಷಟ್ಪದೋಽಸೌ ಕಲಗುಂಜಿತೋ ನ ಯೋ**
**ನ ಗುಂಜಿತಂ ತನ್ನ ಜಹಾರ ಯನ್ಮನಃ ॥**

"ಚೆಲುವಾದ ತಾವರೆಗಳಿಲ್ಲದ ನೀರೇ ಅಲ್ಲಿರಲಿಲ್ಲ. ದುಂಬಿಗಳು ಬಂದುಕೂಡದ ತಾವರೆಯೇ ಅಲ್ಲಿರಲಿಲ್ಲ. ಇಂಪಾಗಿ